# 30-01-2025

# SARVODAYA DINA





ಯ



**ಸತ್ಯಾಗ್ರಹ–ಸ್ಫೂರ್ತಿ ಹಾಗೂ ಅಹಿಂಸಾ–ಪ್ರಿಯ ಗಾಂಧೀಜಿ**

**ಪ್ರೊ. ರಾಜೇಶ್.ಎಂ.ಸಿ**

ಭಾರತವು ಜೈನ ಧರ್ಮ ಹಾಗೂ ಬೌದ್ಧ ಧರ್ಮದ ಮುಖಾಂತರ ಪ್ರಪಂಚಕ್ಕೆ ಅಹಿಂಸೆಯನ್ನು ಬೋಧಿಸಿದ ರಾಷ್ಟ್ರವಾಗಿದೆ. ಗಾಂಧೀಜಿಯವರ ಶಾಂತಿ, ಸೌಹಾರ್ದತ ಹಾಗೂ ಭಾತೃತ್ವದ ದಾರಿಯಲ್ಲಿ ಭಾರತೀಯ ಯುವಶಕ್ತಿಯು ಹೆಜ್ಜೆಹಾಕಿ ಭಾರತದ ಸರ್ವೋದಯದ ಏಳ್ಗೆಗೆ ದುಡಿಯಬೇಕಾಗಿದೆ ಎಂದು ವಿವಿ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಎಂ.ಸಿ.ರಾಜೇಶ್ ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:30.01.2025ರ ಗುರುವಾರ ಐ.ಕ್ಯೂ.ಎ.ಸಿ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ಸಹಯೋಗದೊಂದಿಗೆ ಆಯೋಜಿಸಿದ್ದ "ಸರ್ವೋದಯ ದಿನಾಚರಣೆ"ಯಲ್ಲಿ ಮುಖ್ಯಭಾಷಣಕಾರರಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಭಾರತೀಯರನ್ನು ಗುಲಾಮರನ್ನಾಗಿಸಿಕೊಂಡಿದ್ದ ಬ್ರಿಟೀಷರ ಮುಷ್ಟಿಯಿಂದ ಅಹಿಂಸೆ ಹಾಗೂ ಸತ್ಯಾಗ್ರಹದ ದಾರಿಯ ಮೂಲಕ ಅವರ ದಾಸ್ಯದಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಮಹಾನ್ ಅಹಿಂಸಾವಾದಿ ಗಾಂಧೀಜಿಯವರು ಹತ್ಯೆಯಾದ ದಿನವನ್ನು ರಾಷ್ಟ್ರದಾದ್ಯಂತ ಸರ್ವೋದಯ ದಿನಾಚರನೆಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ ಎಂದ ಅವರು ಗಾಂಧೀಜಿಯವರು ಭೌತಿಕವಾಗಿ ನಮ್ಮ ಜೊತೆಯಲ್ಲಿ ಇಲ್ಲದಿದ್ದರೂ ಅವರು ತೋರಿಸಿಕೊಟ್ಟ ಮಾರ್ಗಗಳು ಇಂದಿಗೂ ಜೀವಂತವಾಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ಮಾತನಾಡುತ್ತಾ ಗಾಂಧೀಜಿಯವರ ಚಿತಾ ಭಸ್ಮವನ್ನು ನಮ್ಮ ಶ್ರೀರಂಗಪಟ್ಟಣದಲ್ಲಿ ವಿಸರ್ಜಿಸಿದ್ದು, ಅಲ್ಲಿ ನಮ್ಮ ಸಂಸ್ಥೆಯವರು ಪ್ರತಿವರ್ಷ ಆಯೋಜಿಸುವ ಸರ್ವೋದಯ ಮೇಳದಲ್ಲಿ ನಮ್ಮ ಕಾಲೇಜಿನ ರಾ.ಸೇ. ಯೋ ಸ್ವಯಂ ಸೇವಕರು ಭಾಗವಹಿಸುವ ಮೂಲಕ ಅವರಿಗೆ ಗೌರವವನ್ನು ಸಮರ್ಪಣೆ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಪ್ರೊ.ಸಿದ್ಧರಾಜು.ಎಸ್, ಅಧ್ಯಾಪಕ ಸಲಹೆಗಾರರಾದ ಡಾ.ಪಿ.ಕೆ.ಗೋವರ್ಧನ್, ರಾ.ಸೇ.ಯೋ ಸ್ವಯಂ ಸೇವಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.








